**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::1934/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸುಜಾತ ಎನ್ ಎಸ್ | **PW-1** |
| **ಗಂಡನ ಹೆಸರು** | : | ಚಂದ್ರಶೇಖರ | **CW-1** |
| **ವಯಸ್ಸು** | : | 45 ವರ್ಷ | |
| **ಉದ್ಯೋಗ** | : | KSRTC, Conductor | |
| **ವಾಸಸ್ಥಳ** | : | ಹೊಸದುರ್ಗ | |

**ದಿನಾಂಕಃ24-03-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ದಿನಾಂಕ 18.05.2023 ರಂದು ನಾನು KA 42 F 0172 ನಂಬರ್ ನ ಅಜ್ಜಂಪುರದಿಂದ ಬುಕ್ಕಾಂಬೂದಿ ಶಿವನಿ ಮಾರ್ಗವಾಗಿ ಹೊಳಲ್ಕೆರೆಗೆ ಹೋಗುತ್ತಿದ್ದ ಬಸ್ ನಲ್ಲಿ conductor ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು. ಮಧ್ಯಾಹ್ನ ಊಟಕ್ಕೆಂದು ನಾವು ಅಜ್ಜಂಪುರ ಬಸ್ ನಿಲ್ದಾಣದಲ್ಲಿ ಮಃ 01.15 ಗಂಟೆಯಿಂದ 02.15 ಗಂಟೆ ಮಧ್ಯದಲ್ಲಿ ನಿಲ್ಲಿಸಿದ್ದು ನಮ್ಮ ಬಸ್ ನಲ್ಲಿ ಸುಮಾರು 15 ಜನ ಪ್ರಯಾಣಿಕರು ಆ ಸಮಯದಲ್ಲಿ ಹತ್ತಿದ್ದರು. ಮಧ್ಯಾಹ್ನ 01.45 ಗಂಟೆ ಸಮಯದಲ್ಲಿ ಖಾಸಗಿ merchant ಬಸ್ ನ ಏಜೆಂಟ್ ಆಗಿರುವ ಆರೋಪಿಯು ನಮ್ಮ ಬಸ್ ನ ಒಳಗೆ ಬಂದು ಅಲ್ಲಿ ಕುಳಿತ್ತಿದ್ದ ಪ್ರಯಾಣಿಕರಲ್ಲಿ ಈ ಬಸ್ ಹೋಗುವುದಿಲ್ಲ ನಮ್ಮ ಬಸ್ ಗೆ ಬನ್ನಿ ಎಂದು ಕರೆಯುತ್ತಿದ್ದು ನಾನು ಬಸ್ ನ ಮುಂಭಾಗದ ಬಾಗಿಲಿನಿಂದ ಹೋಗಿ ಆರೋಪಿಯನ್ನು ಪ್ರಶ್ನಿಸಿದಾಗ ಆತನು ಏಕಾಏಕಿ ನನ್ನನ್ನು ಬಸ್ ನಿಂದ ಕೆಳಗೆ ದೂಡಿರುತ್ತಾನೆ. ಮತ್ತು ನಾನು ನೆಲಕ್ಕೆ ಬಿದ್ದಿರುತ್ತೇನೆ ಮತ್ತು ಅದರಿಂದ ನನಗೆ ಮೊಣಕಾಲಿಗೆ ತೀವ್ರವಾದ ಪೆಟ್ಟು ಆಗಿರುತ್ತದೆ ಮತ್ತು ನನ್ನ ಕೈಯಲ್ಲಿ ETM ಮೆಷಿನ್ ಸಹ ಕೆಳಗೆ ಬಿದ್ದು ಒಡೆದು ಹೋಗಿರುತ್ತದೆ. ಸದರಿ ಕೃತ್ಯವನ್ನು ಅಲ್ಲಿದ್ದ ಸಾರ್ವಜನಿಕರು ನೋಡಿರುತ್ತಾರೆ. ನಂತರ ನಾನು ಗಲಾಟೆಯಾಗಿರುವ ಕುರಿತು ವರದಿ ಮಾಡಲು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆದರೆ ನನಗೆ ತೀರಾ ಕಾಲು ನೋವು ಇದ್ದ ಕಾರಣದಿಂದ ಪೊಲೀಸ್ ಠಾಣೆಯಿಂದ ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಸಾಕ್ಷಿಯು ಸದರಿ ಹೇಳಿಕೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ

This is a True Copy of the Court Records Online. Authenticated @ districts.ecourtsindia.com/cnr/KACM710029432023/truecopy/order-2.pdf

www.ecourtsindia.com

ಗುರುತಿಸಿದ್ದು ಹೇಳಿಕೆಯನ್ನು ನಿಪಿ1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ನಂತರ ದಿಃ 19.05.2023 ರಂದು ಪೊಲೀಸರು ನನಗೆ ಘಟನಾ ಸ್ಥಳವನ್ನು ತೋರಿಸಲು ಹೇಳಿದ ಮೇರೆಗೆ ನಾನು ಆ ದಿನ ಮಧ್ಯಾಹ್ನ ಪೊಲೀಸರಿಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ಆ ದಿನ ಮಃ 01.30 ರಿಂದ 02.30 ಗಂಟೆ ಮಧ್ಯದಲ್ಲಿ ಸ್ಥಳ ಮಹಜರ್ ಅನ್ನು ತಯಾರಿಸಿರುತ್ತಾರೆ. ಅದರಲ್ಲಿ ಇರುವ ವಿಚಾರ ನನಗೆ ಓದಿ ತಿಳಿಸಿದ ಮೇರೆಗೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ದಿನಾಂಕ 19.05.2023 ರ ಒಂದು ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು.

ಆರೋಪಿಯು ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ನನಗೆ ಮಾನಭಂಗ ಉಂಟು ಮಾಡಿ ಹಲ್ಲೆ ಮಾಡಿರುತ್ತಾನೆ ಹಾಗೂ ಅವನ ಕೃತ್ಯದಿಂದ ನಮ್ಮ ಇಲಾಖೆಯ ETM Machine ಒಡೆದು ಹೋಗಿ ಸರ್ಕಾರಕ್ಕೆ ಸುಮಾರು 5 ಸಾವಿರ ರೂಪಾಯಿ ನಷ್ಟವಾಗಿರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ .

ಸಾಕ್ಷಿಯ ಸಹಿ::

This is a True Copy of the Court Records Online. Authenticated @ districts.ecourtsindia.com/cnr/KACM710029432023/truecopy/order-2.pdf